ಇಂದು ದಿ**: 06.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು ಎದುರುದಾರಳ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದ,

ನನ್ನ ಮತ್ತು ಎದುರುದಾರಳ ಮದುವೆಯಾಗಿ 28 ವರ್ಷ ಆಗಿರುತ್ತದೆ. ನಮಗೆ ಇಬ್ಬರು ಮಕ್ಕಳು ಇರುತ್ತಾರೆ. ಎದುರುದಾರಳು ಹೊಸದುರ್ಗದಲ್ಲಿ ವಾಸವಾಗಿರುತ್ತಾಳೆ ಎನ್ನುವುದು ನಿಜ. ಎದುರುದಾರಳು 28 ವರ್ಷಗಳಿಂದ ಹೊಸದುರ್ಗದಲ್ಲೇ ವಾಸವಾಗಿರುತ್ತಾಳೆ. ನಾನು ಹೊಸದುರ್ಗದಲ್ಲಿ 03 ವರ್ಷ ವಾಸವಾಗಿದ್ದೆ. ಹೊಸದುರ್ಗದಲ್ಲಿದ್ದಾಗ ನಾನು ಮತ್ತು ಎದುರುದಾರಳು ಒಂದೇ ಮನೆಯಲ್ಲಿ ವಾಸವಾಗಿದ್ದೆವು.

ನಾನು ಸಹಾಯಕ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ವಾಸಸ್ಥಳ ಅಜ್ಜಂಪುರದ ಹತ್ತಿ ಅಣ್ಣೇ ಗ್ರಾಮ. ಸದರಿ ಗ್ರಾಮದಲ್ಲಿ ನಮ್ಮ ಮನೆ ಮತ್ತುಆಸ್ತಿಗಳು ಇರುತ್ತವೆ. ನಾವು 4 ಜನ ಅಣ್ಣ ತಮ್ಮಂದಿರುಗಳು. ನಾವು ಸಹೋದರರು ಬೇರೆ ಬೇರೆ ಆಗಿರುತ್ತೇವೆ. ನನಗೆ 11 ಗುಂಟೆ ಎರೆ ಹೊಲ ಬಂದಿರುತ್ತದೆ. ನಮ್ಮ ಅಣ್ಣತಮ್ಮಂದಿರಿಂದ ನಾನು ಪ್ರತ್ಯೇಕವಾಗಿ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇನೆ. ಈಗ ನಾನು ನಂದಿಬಟ್ಟಲು ಗ್ರಾಮದಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಹೊಸದುರ್ಗದಲ್ಲಿ ವಾಸವಾಗಿದ್ದಾಗ ಕಡೂರು ತಾಲ್ಲೂಕು, ಮರವಂಜಿ ಗ್ರಾಮದಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ಮರವಂಜಿಯಿಂದ ತರಿಕೆರೆ ತಾಲ್ಲೂಕು, ಲಿಂಗದಹಳ್ಳಿ ಗ್ರಾಮಕ್ಕೆ ವರ್ಗಾವಣೆಯಾಗಿರುತ್ತದೆ. ಲಿಂಗದಹಳ್ಳಿಗೆ ವರ್ಗಾವಣೆಯಾದ ನಂತರ ನಮ್ಮ ತಂದೆ ತಾಯಿಗಳೊಂದಿಗೆ ಅಣ್ಣೇ ಗ್ರಾಮದಲ್ಲಿ ವಾಸವಾಗಿರುತ್ತೇನೆ.

ನನ್ನ ಮತ್ತು ಎದುರುದಾರಳ ಮಧ್ಯೆ ಹೇಳಲಾಗದ ಸಂಗತಿ ನಡೆದಿದ್ದರಿಂದ, ನಾನು ಅವಳನ್ನು ಬಿಟ್ಟು ಹೋಗಿರುತ್ತೇನೆ. ವೀಣಾ ಗೊತ್ತಿರುವುದಿಲ್ಲ. ಹೆಚ್.ಎನ್. ಕುಮಾರ ಎಂದರೆ ನಾನೆ. ಚಿಕ್ಕಮಗಳೂರು ಜಿಲ್ಲೆ, ತರಿಕೆರೆ ತಾಲ್ಲೂಕು, ಅಜ್ಜಂಪುರ ಹೋಬಳಿ, ಅಣ್ಣೇ ಗ್ರಾಮದ ಲೇಟ್ ಹೆಚ್.ಆರ್. ನಾಗಪ್ಪ ಇವರ ಮಗ ಹೆಚ್.ಎನ್. ಕುಮಾರ ಎಂದರೆ ನಾನೆ. ದಿ: 03.01.2019 ರಲ್ಲಿ ನಾನು ನನ್ನ ಧರ್ಮಪತ್ನಿಯಾದ ಶ್ರೀಮತಿ ವೀಣಾ ಇವಳಿಗೆ ನೊಂದಾಯಿತ ದಾನಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸಾಕ್ಷಿ, ಶ್ರೀಮತಿ ಎನ್ನುವುದು ತಪ್ಪಾಗಿರುತ್ತದೆ ಎನ್ನುತ್ತಾರೆ. ಸದರಿ ವೀಣಾ ಇವಳ ಗಂಡ ಯಾರು ಎಂದು ಗೊತ್ತಿರುವುದಿಲ್ಲ. ಸದರಿ ವೀಣಾ ಯಾರ ಮಗಳು ಎಂದು ಗೊತ್ತು. ಸದರಿ ವೀಣಾ ನಾಗರಾಜಪ್ಪ ಮತ್ತು ಇಂದ್ರಮ್ಮ ಇವರ ಮಗಳು. ಸದರಿ ನಾಗರಾಜಪ್ಪ ಮತ್ತು ಇಂದ್ರಮ್ಮ ಇವರು ಬೀರೂರು ಗ್ರಾಮದವರು. ಸದರಿ ನಾಗರಾಜಪ್ಪ ಮತ್ತು ಇಂದ್ರಮ್ಮ ಇವರಿಗೆ 4 ಜನ

ಹೆಣ್ಣು ಮಕ್ಕಳು ಇರುತ್ತಾರೆ. ಅವರಲ್ಲಿ ವೀಣಾ 3 ನೇ ಮಗಳು. ಸದರಿ 4 ಜನ ಹೆಣ್ಣು ಮಕ್ಕಳಲ್ಲಿ ಇಬ್ಬರ ವಿವಾಹ ಮಾತ್ರ ಆಗಿರುತ್ತದೆ. ಇಬ್ಬರನ್ನು ನಂದಿಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ.ಅವರ ಗಂಡಂದಿರ ಹೆಸರು ಪ್ರಕಾಶ ಮತ್ತು ಚಂದ್ರಪ್ಪ. ಸದರಿ ಪ್ರಕಾಶ ವೀಣಾನ ಅಕ್ಕನ ಗಂಡ. ವೀಣಾ ಇವಳ ತಂಗಿಯ ಹೆಸರು ಪಲ್ಲವಿ. ಸದರಿ ಪಲ್ಲವಿ ವಿವಾಹ ಆಗಿರುತ್ತದೆ. ಸದರಿ ಪಲ್ಲವಿ ಗಂಡನ ಹೆಸರು ಚಂದ್ರಪ್ಪ.

ವೀಣಾ ಇವಳು ಅಣ್ಣೇ ಗ್ರಾಮದಲ್ಲಿ 7-8 ವರ್ಷಗಳಿಂದ ಸ್ವಂತ ಮನೆಯಲ್ಲಿ ವಾಸವಾಗಿರುತ್ತಾಳೆ. ಸದರಿ ಮನೆ ನಂಬರ್ ಗೊತ್ತಿರುವುದಿಲ್ಲ. ವೀಣಾ ಇವಳು ಅಣ್ಣೇ ಗ್ರಾಮದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿರುತ್ತದೆ ಎಂದರೆ ಸಾಕ್ಷಿ, ಗೊತ್ತಿಲ್ಲ ಎಂದು ಹೇಳತ್ತಾರೆ. ವೀಣಾ ಇವಳ ಗಂಡನ ಹೆಸರು ಹೆಚ್.ಎನ್. ಕುಮಾರ ಎಂದು ನಮೂದು ಆಗಿರುತ್ತದೆ ಎಂದರೆ ಸಾಕ್ಷಿ ತಪ್ಪಾಗಿ ನಮೂದಾಗಿರುತ್ತದೆ ಎನ್ನುತ್ತಾರೆ.ವೀಣಾ ಇವಳ ಮನೆಯ ನಂಬರ್ 67 ಎಂದು ಗೊತ್ತಿರುವುದಿಲ್ಲ.

ನಮ್ಮ ತಂದೆ ತಾಯಿ ಇಬ್ಬರು ಮೃತಪಟ್ಟಿರುತ್ತಾರೆ. ನಮ್ಮ ತಂದೆ- ತಾಯಿ ಮೃತಪಟ್ಟು 7-8 ವರ್ಷವಾಗಿರುತ್ತದೆ. ಈ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ನಮ್ಮ ತಂದೆ- ತಾಯಿ ಮೃತಪಟ್ಟಿರುತ್ತಾರೆ. ನಮ್ಮ ತಂದೆ- ತಾಯಿ ಜೀವಂತ ಇರುತ್ತಾರೆ ಎಂದು ನನ್ನ ಅರ್ಜಿಯಲ್ಲಿ ತೋರಿಸಿರುತ್ತೇನೆ ಎಂದರೆ ಸಾಕ್ಷಿ, ವಕೀಲರು ತಪ್ಪಾಗಿ ಬರೆದಿರುತ್ತಾರೆ ಎಂದು ಹೇಳುತ್ತಾರೆ.

ನಾನು 2 ನೇ ಮದುವೆ ಮಾಡಿಕೊಂಡಿರುತ್ತೇನೆ ಎಂದು ಎದುರುದಾರಳು ಡಿ.ಡಿ.ಪಿ.ಐ ಇವರಿಗೆ ಪತ್ರ ಬರೆದಿದ್ದಳು ಎಂದರೆ ನಿಜ. ಆ ಸಮಯದಲ್ಲಿ ವಿಚಾರಣೆ ಮಾಡಿರುತ್ತಾರೆ ಎನ್ನುವುದು ನಿಜ. ಅದರ ವಿರುದ್ಧ ನಾನು ಕೆ.ಐ.ಟಿ.ಗೆ ಹೋಗಿರುತ್ತೇನೆ ಎನ್ನುವುದು ನಿಜ. ಕೆ.ಐ.ಟಿಯಲ್ಲಿ ನನ್ನ ಅರ್ಜಿಯನ್ನು ವಜಾಗೊಳಿಸಿರುತ್ತಾರೆ ಎನ್ನುವುದು ನಿಜ. ದಿ: 04.03.2025 ರಲ್ಲಿ ಕೆ.ಐ.ಟಿಯಲ್ಲಿ ತೀರ್ಮಾನ ಆಗಿರುತ್ತದೆ ಎನ್ನುವುದು ನಿಜ. ಚಿಕ್ಕಮಗಳೂರು ಡಿ.ಡಿ.ಪಿ.ಐ ಇವರಿಗೆ ಅರ್ಜಿಯನ್ನು ಸಲ್ಲಿಸಿದ್ದಳು ಎನ್ನುವುದು ನಿಜ. ಆ ಸಮಯದಲ್ಲಿ ಎದುರುದಾರಳಿಗೆ ವಿಚಾರಣೆ ಸಲುವಾಗಿ ನೋಟೀಸ ಬಂದಿತ್ತು ಎನ್ನುವುದು ನಿಜ. ವೀಣಾ ಇವಳ ಹೆಸರು ನನ್ನ ಸೇವಾ ಪುಸ್ತಕದಲ್ಲಿ ಹೆಂಡತಿ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

ಈ ಹಿಂದೆ ನಾನು ತರಿಕೆರೆ ನ್ಯಾಯಾಲಯದಲ್ಲಿ 2015 ರಲ್ಲಿ ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದೆ ಎನ್ನುವುದು ನಿಜ. ಸದರಿ ಅರ್ಜಿ ವಜಾ ಆಗಿರುತ್ತದೆ ಎನ್ನುವುದು ನಿಜ. ಸದರಿ ಅರ್ಜಿಯಲ್ಲಿಬರೆದ ಅಂಶಗಳನ್ನೇ ಈ ಅರ್ಜಿಯಲ್ಲಿ ಹೇಳಿರುತ್ತೇನೆ ಎನ್ನುವುದು ನಿಜ. ಈ ಅರ್ಜಿಯನ್ನು ಸಲ್ಲಿಸುವಾಗ ಆ ಅರ್ಜಿಯ ನಕಲನ್ನು ನಮ್ಮ ವಕೀಲರಿಗೆ ತಂದು ಕೊಟ್ಟಿದ್ದೆ ಎನ್ನುವುದು ನಿಜ. 2 ನೇ

ಮದುವೆ ಆಗಿದೆ ಎಂದರೆ ನನ್ನ ನೌಕರಿಯನ್ನು ಕಳೆದುಕೊಳ್ಳುತ್ತೇನೆ ಎನ್ನುವ ಕಾರಣ ವಿವಾಹ ವಿಚ್ಛೇದನಕ್ಕೆ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಎದುರುದಾರಳ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಹೊಸದುರ್ಗ.